## ಕಲ್ಪನೆ



ಬಾಳಮುಸ್ಸಂಜೆಯಲ್ಲಿ ವಿಶ್ವಾಸದ ಮುಗುಳ್ನಗುವೊಂದೇ ಸಂಪತ್ತು. ಬದುಕಿನಲ್ಲಿ ಕ್ರಮಿಸಿದ ಏರುತಗ್ಗುಗಳ ಪಯಣವು ಕಾವಲಿಯಷ್ಟೇ ಬಿಸಿ. ಹೆಜ್ಜೆಗೆ ಹೆಜ್ಜೆ ಜೋಡಿಸುವುದು ಸುಗಮವೇನೂ ಆಗಿರಲಿಲ್ಲ. ಸುಕ್ಕುಗಟ್ಟಿದ ಹಣೆಯ ಮೇಲೆ ಕಾಣುವ ದಣಿವೇ ಹೇಳುತ್ತಿದೆಯಲ್ಲ ಎಲ್ಲವನ್ನೂ. ಆ ದಣಿವೆಲ್ಲ ಮಾಯವಾಗುವಂತೆ, ಸಾಂತ್ವನ ಹೇಳುತ್ತಿದೆ ಆಕೆಯ ಮೊಗದಲ್ಲಿ ಮಿನುಗುವ ನಗು. ಮಗುವಿನಂತೆ ಕಾಯುತ್ತಿದ್ದಾನೆ ಅವನು ಬೆಚ್ಚನೆಯ ತುತ್ತಿಗಾಗಿ. ಸಂಜೆಯ ನೆಮ್ಮದಿಗಾಗಿ...

ಈ ಜೋಡಿ ಜೀವಗಳ ಭಾವಗಳನ್ನು ನೀವು ಹೇಗೆ ಓದಿಕೊಂಡಿರಿ? ಆ ಭಾವಗಳನ್ನು ಕವಿತೆಯ ಸಾಲುಗಳಲ್ಲಿ ನೇಯ್ದು, ನಮಗೆ ಕಳಿಸಿಕೊಡಿ.

ನಿಮ್ಮ ಕಲ್ಪನೆಯ ಕವಿತೆ ನಮಗೆ ತಲುಪಲು ಕೊನೆಯ ದಿನ ಅಕ್ಟೋಬರ್ 15.

**ಚಿತ್ರ: ನಾಗೇಶ ಬಾರ್ಕಿ**

---

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
**ಇ–ಮೇಲ್:** editormy@mayura.co.in